ಮಾಡಲು ಕೆ.ಐ.ಎ.ಡಿ.ಬಿ.ಗೆ ಸೂಚನೆ ಮಾಡಿದ್ದೇವೆ. ನಾವೇನು ಹಣವನ್ನು ತೆಗೆದುಕೊಳ್ಳುತ್ತೇವೆ ಅದರಿಂದ ರಸ್ತೆ, ನೀರಿನ ಸೌಲಭ್ಯ ಮುಂತಾದವುಗಳನ್ನು ಅಭಿವೃದ್ಧಿಪಡಿಸಲು, ಇನಫ್ರಾಸ್ಟಕ್ಚರ್ ಅಭಿವೃದ್ಧಿ ಮಾಡಲು ಖರ್ಚು ಮಾಡುತ್ತೇವೆ. ಆ ದೃಷ್ಟಿಯಿಂದ ಇದರಲ್ಲಿ ಏನು ಕಡಿಮೆ ಮಾಡಲು ಸಾಧ್ಯವಾಗುತ್ತದೆಯೇ ಅದರ ಬಗ್ಗೆ ಪರಿಶೀಲನೆ ಮಾಡುತ್ತೇವೆ.

ಪರಿಶಿಷ್ಟ ಜಾತಿ/ವರ್ಗಗಳ ಆಯೋಗ ರಚನೆ.

100 - ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಆಯೋಗ ರಚಿಸಿರುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆಯೇ?*

ಆ) *ಇದ್ದ ಇದರ ಕಾರ್ಯವ್ಯಾಪ್ತಿಯ ಬಗ್ಗೆ ಏನಾದರೂ ಸಮಿತಿಯನ್ನು ರಚಿಸಲಾಗಿದೆಯೇ?*

ಇ) *ಹಾಗಿದ್ದಲ್ಲಿ, ಇದು ಯಾವಾಗಿನಿಂದ ಪ್ರಾರಂಭವಾಗುವುದು?*

ಶ್ರೀ ರಮೇಶ್ ಸಿ. ಜಿಗಜಿಣಗಿ (ಸಮಾಜ ಕಲ್ಯಾಣ ಸಚಿವರು) :

ಅ) ಹೌದು. ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಆ) 'ಅ' ಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ಎನ್. ಯೋಗೇಶ್ ಭಟ್ : ಸನ್ಮಾನ್ಯ ಅಧ್ಯಕ್ಷರೆ, ಮಂಡಲ ಆಯೋಗದ ವರದಿಯ ಮೇಲೆ ಸುಪ್ರೀಂ ಕೋರ್ಟ ಕೊಟ್ಟ ನಿರ್ಣಯದ ಪ್ರಕಾರ ಪ್ರತಿಯೊಂದು ರಾಜ್ಯಗಳಲ್ಲಿ ಈ ಆಯೋಗವನ್ನು ಆರಂಭ ಮಾಡಬೇಕಾಗಿತ್ತು. ಇದರ ಬಗ್ಗೆ ಪತ್ರಿಕೆಯಲ್ಲಿ ಹೇಳಿಕೆಯನ್ನು ಕಳಿದ ಸೆಪ್ಟಂಬರನಿಂದ ಕೊಡುತ್ತಿದ್ದೀರಿ. ತಾವು ಇನ್ನೂ ಏಕೆ ಆ ಆಯೋಗವನ್ನು ಮಾಡಿಲ್ಲ? ಈ ಆಯೋಗದ ಕಾರ್ಯವ್ಯಾಪ್ತಿಯ ಬಗ್ಗೆ ಸ್ಪಷ್ಟೀಕರಣವನ್ನು ಕೊಟ್ಟಿಲ್ಲ. ಹೈಕೋರ್ಟನಲ್ಲಿ ವಿಶೇಷವಾಗಿ ಕಾನೂನು ವಿಭಾಗಗಳನ್ನು ಮಾಡಿಕೊಂಡು ಪರಿಶಿಷ್ಟ ಪಂಗಡಗಳಿಗೆ ಪ್ರತ್ಯೇಕವಾಗಿ ವಕೀಲರುಗಳನ್ನು ನೇಮಕ ಮಾಡಿಕೊಂಡು ಅವರುಗಳಿಗೆ ಪ್ರತ್ಯೇಕವಾದ ವ್ಯವಸ್ಥೆ ಮಾಡಿಕೊಳ್ಳುವುದು ಇದರಲ್ಲಿ ಅಡಕವಾಗಿದೆಯೇ ಎಂದು ಕೇಳುತ್ತಿದ್ದೇನೆ.

ಶ್ರೀ ರಮೇಶ್ ಸಿ. ಜಿಗಜಿಣಗಿ : ಸನ್ಮಾನ್ಯ ಅಧ್ಯಕ್ಷರೆ, ಸುಪ್ರೀಂ ಕೋರ್ಟ್ ಮಂಡಲ ಆಯೋಗದ ಬಗ್ಗೆ ಆಜ್ಞೆ ಮಾಡಿದ್ದು ಶಾಶ್ವತ ಹಿಂದುಳಿದ ವರ್ಗಗಳ ಕಮೀಷನ್ ಬಗ್ಗೆ. ಆದರೆ ಎಸ್. ಸಿ ಮತ್ತು ಎಸ್. ಟಿ. ಪರ್ಮನೆಂಟ್ ಕಮೀಷನ್ ಬಗ್ಗೆ ಸುಪ್ರೀಂ ಕೋರ್ಟ ಯಾವುದನ್ನೂ ಹೇಳಿಲ್ಲ. ಆದರೂ ಬೇರೆ ಬೇರೆ ಸಂಘಸಂಸ್ಥೆಗಳು, ಶಾಸಕರು ಇಂಥಿಂಥ ಜಾತಿಗಳದವರು ಪರಿಶಿಷ್ಟ ಜಾತಿಯ ಅಡಿಯಲ್ಲಿ ಬರುತ್ತದೆ ಆದ್ದರಿಂದ ಆ ಜಾತಿಗಳನ್ನು ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿ ಸೇರಿಸಿ ಎಂದು ಕೇಳಿಕೊಳ್ಳುತ್ತಿದ್ದಾರೆ. ಪರಿಶಿಷ್ಟ ಜಾತಿ ಮತ್ತು ಪಂಗಡವರಿಗೆ ಹಿಂದುಳಿದ ವರ್ಗದ ಆಯೋಗ. ಯಾವ ರೀತಿ ಇದೆಯೋ ಅದೇ

ರೀತಿ ಆಯೋಗವನ್ನು ಮಾಡಬೇಕೆಂದು ಸರ್ಕಾರದ ಮುಂದೆ ಪ್ರಸ್ತಾವನೆ ಇದೆ. ಇದರ ಕಾರ್ಯವ್ಯಾಪ್ತಿಯೇನು ಎಂದು ಕೇಳಿದ್ದಾರೆ. ನನಗೆ ತಿಳಿದಿರುವ ಮಾಹಿತಿಯ ಪ್ರಕಾರ, ಪರಿಶಿಷ್ಟ ಜಾತಿ ಮತ್ತು ಪಂಗಡವರ ಪಟ್ಟಿಯಲ್ಲಿ ಹಲವಾರು ಜಾತಿಗಳನ್ನು ಸೇರಿಸಲು ವಿವಿಧ ಸಂಸ್ಥೆಗಳು ಮನವಿಯನ್ನು ಪರಿಶೀಲಿಸುವುದು, ಎರಡನೆಯದಾಗಿ, ಪರಿಶಿಷ್ಟ ಜಾತಿ ಮತ್ತು ವರ್ಗಗಳ ಜಾತಿಯ ಪಟ್ಟಿಗೆ ಸೇರ್ಪಡೆ ಮಾಡಬೇಕಾಗಿರುವ ಜಾತಿಯ ಜನಾಂಗದವರ ಸ್ಥಿತಿಗತಿಗಳ ಬಗ್ಗೆ ಅಧ್ಯಯನ ನಡೆಸಿ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುವುದು. ಮೂರನೆಯದಾಗಿ ಪರಿಶಿಷ್ಟ ಜಾತಿ ಮತ್ತು ವರ್ಗಕ್ಕೆ ಸೇರಿದ ವ್ಯಕ್ತಿಗಳು ಸುಳ್ಳು ಜಾತಿ ಪತ್ರವನ್ನು ಪಡೆಯುವುದನ್ನು ತಡೆಯುವ ಬಗ್ಗೆ ಕ್ರಮಗಳನ್ನು ತೆಗೆದುಕೊಳ್ಳುವ ಬಗ್ಗೆ ಸರ್ಕಾರಕ್ಕೆ ಸಲಹೆ ಮಾಡುವುದು. ನಾಲ್ಕನೆಯದಾಗಿ, ಪರಿಶಿಷ್ಟ ಜಾತಿ ಮತ್ತು ವರ್ಗಗಳ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳನ್ನು ಅಧ್ಯಯನ ಮಾಡಿ ಅದರ ಅಭಿವೃದ್ಧಿಗಾಗಿ ಕ್ರಮಗಳನ್ನು ತೆಗೆದುಕೊಳ್ಳುವ ಬಗ್ಗೆ ಸರ್ಕಾರಕ್ಕೆ ಸಲಹೆಯನ್ನು ಮಾಡಬೇಕೆಂದು ನಾವು ಯೋಚನೆ ಮಾಡಿದ್ದೇವೆ. ಇದನ್ನು ಮಾಡಬೇಕೋ ಬೇಡವೋ ಎಂಬ ಬಗ್ಗೆ ಅಂತಿಮ ನಿರ್ಣಯವನ್ನೂ ಆಗಿಲ್ಲ. ಇದು ಸರ್ಕಾರದ ಪರಿಶೀಲನೆಯಲ್ಲಿದೆ.

ಆಶ್ರಯ ಅಂಬೇಡ್ಕರ್ ಮನೆಗೆ ಹಣ ಬಿಡುಗಡೆ

102 - ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ (ಕುಂದಾಪುರ) : ಮಾನ್ಯ ವಸತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಿಂದೆ ಮಂಜೂರು ಮಾಡದ ಆಶ್ರಯ ಅಂಬೇಡ್ಕರ್ ಮನೆಗಳಿಗೆ ಹಣ ಬಿಡುಗಡೆ ಮಾಡದೆ ಇತ್ತೀಚೆಗೆ ಮಂಜೂರು ಮಾಡಿದ ಮನೆಗಳಿಗೆ ಹಣ ಬಿಡುಗಡೆ ಮಾಡಿರುವ ಔಚಿತ್ಯವೇನು?

ಆ) ಆರ್ಥಿಕವಾಗಿ, ಹಿಂದುಳಿದವರಿಗೆ ಮನೆ ಮಂಜೂರಾಗಿ ಒಂದು ವರ್ಷಕ್ಕೂ ಹೆಚ್ಚು ಸಮಯವಾದರೂ ಹಣ ಬಿಡುಗಡೆ ಮಾಡಿರುವುದು ನಿಜವೇ?

ಶ್ರೀ ಬಸವರಾಜರಾಯರೆಡ್ಡಿ (ವಸತಿ ರಾಜ್ಯ ಸಚಿವರು) :

ಅ) **ರಾಜ್ಯದ ಕಾರ್ಯಕ್ರಮ ಭೌತಿಕ ಗುರಿ:**

	ಆಶ್ರಯ	ಅಂಬೇಡ್ಕರ್	ಇಂದಿರಾ ಆವಾಜ್
1993-94	1,06,000	22,134	12,103
1994-95	1,50,000	12,500	14,652
1995-96	60,000	25,000	44,000

1994 ಸೆಪ್ಟೆಂಬರ್ 5 ರಂದು ಸರ್ಕಾರಿ ಆಜ್ಞೆ ಪಿಹೆಚ್‌ಎಸ್ - 109 ಆಶ್ರಯ ಯೋಜನೆ ಅಡಿ 1.50 ಲಕ್ಷ ಮನೆಗಳಿಗೆ ರಾಜ್ಯದ ವಿವಿಧ ವಿಧಾನಸಭಾ ಕ್ಷೇತ್ರಗಳಿಗೆ ಮನೆಗಳು ಮಂಜೂರು